



# ‘ಹಚ್ಚಹಸಿರ ಮೈಸೂರು ವಿವೇಕಪ್ರಭೆಯ ಮೈಸೂರು’ ಉದ್ಘಾಟನೆ

ಮೈಸೂರು ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ದಿನಾಂಕ ೨೦೨೦ರ ಸೆಪ್ಟೆಂಬರ್ ೨೬ರಂದು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ **‘ಹಚ್ಚಹಸಿರ ಮೈಸೂರು ವಿವೇಕಪ್ರಭೆಯ ಮೈಸೂರು’** ಕಾರ್ಯಕ್ರಮದ ಉದ್ಘಾಟನೆಯು ನೆರವೇರಿತು. ಆರೋಗ್ಯಕರ ಜೀವನವನ್ನು ನಡೆಸಲು ಅತ್ಯಗತ್ಯವಾದ ವಾತಾವರಣದ ಶುದ್ಧತೆ, ಮಾನಸಿಕ ಆರೋಗ್ಯವನ್ನು ಹೊಂದಿರಲು ಅಗತ್ಯವಾದ ನೈತಿಕ ಶುದ್ಧತೆ ಹಾಗೂ ಅಂತರಂಗದ ಶುದ್ಧತೆಯನ್ನು ಹೊಂದಲು ಅಗತ್ಯವಾದ ಆಧ್ಯಾತ್ಮಿಕ ಪ್ರಗತಿ — ಈ ಮೂರೂ ಆಶಯಗಳನ್ನು ಪ್ರತಿಬಿಂಬಿಸುವಂತೆ ಉಚಿತ ಸಸಿಗಳ ವಿತರಣೆ, ‘ವಿವೇಕಪ್ರಭ’ಮಾಸಪತ್ರಿಕೆಯ ಪ್ರಸರಣ ಹಾಗೂ ದಿವ್ಯತ್ರಯರ ಜೀವನ-ಸಂದೇಶಗಳನ್ನೊಳಗೊಂಡ ‘ಸ್ಫೂರ್ತಿ’ ಪುಸ್ತಕದ ವಿತರಣೆ — ಇದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಮೈಸೂರು ಆಶ್ರಮದ ಹಿಂದಿನ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ಸುರೇಶಾನಂದಜಿ ಮಹಾರಾಜ್ ಅವರ ಸ್ಮರಣಾರ್ಥ ಸಸಿಗಳ ವಿತರಣೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಮೈಸೂರು ಆಶ್ರಮ, ವಿದ್ಯಾಶಾಲೆ, ‘ವಿವೇಕ ಸ್ಮಾರಕ’ ಹಾಗೂ ರಾಮಕೃಷ್ಣ ವಿದ್ಯಾಕೇಂದ್ರ — ಈ ನಾಲ್ಕು ಸ್ಥಳಗಳಲ್ಲಿ ಸಸಿಗಳ ಹಾಗೂ ಪುಸ್ತಕ-ಪತ್ರಿಕೆಗಳ ವಿತರಣೆ ನಡೆಯಲಿದೆ.

ಮಧ್ಯಾಹ್ನ ೩-೩೦ಕ್ಕೆ ಭಜನೆ, ವೇದ ಪಠಣಗಳೊಂದಿಗೆ ಆರಂಭಗೊಂಡ ಸಭಾ ಕಾರ್ಯಕ್ರಮದಲ್ಲಿ ವಿದ್ಯಾಶಾಲೆಯ ಸಂಚಾಲಕರಾದ ಸ್ವಾಮಿ ಯುಕ್ತೇಶಾನಂದಜಿಯವರು ಅತಿಥಿಗಳನ್ನು ಸ್ವಾಗತಿಸಿ ಮಾತನಾಡಿದರು. ಬಳಿಕ ಸ್ವಾಮಿ ಶಾಂತಿವ್ರತಾನಂದಜಿಯವರು ಪ್ರಸ್ತಾವನೆ ಭಾಷಣ ಮಾಡಿದರು. ಈ ಯೋಜನೆಯ ‘ಆಶಯ ಭಾಷಣ’ ಹಾಗೂ ಕಾರ್ಯಪ್ರಣಾಳಿಕೆಯನ್ನು ಕುರಿತು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿಯವರು ಮಾತಾನಾಡಿದರು. ಗಣ್ಯರು ಹಾಗೂ ಅತಿಥಿಗಳು ಗಿಡಗಳಿಗೆ ನೀರೆರೆಯುವ ಮೂಲಕ ಈ ಕಾರ್ಯಕ್ರಮದ ಉದ್ಘಾಟನೆ ನಡೆಯಿತು. ಇದರೊಂದಿಗೆ ಗಣ್ಯರಿಗೆ ಸಸಿಗಳನ್ನು ನೀಡಿ ಗೌರವಿಸಲಾಯಿತು. ವಿಶೇಷ ಆಹ್ವಾನಿತರಾದ ಶ್ರೀ ಸಿ.ಹೆಚ್. ವಿಜಯಶಂಕರ್, ಡಾ. ವಿನಯ್‌ಕುಮಾರ್, ಡಾ. ವಾಮನರಾವ್ ಬಾಪಟ್ ಮುಂತಾದವರು ಭಾಷಣ ಮಾಡಿದರು. ಬಳಿಕ ‘ವಿವೇಕಪ್ರಭ’ ಪತ್ರಿಕೆಯ ಬಗ್ಗೆ ಸಂಪಾದಕರಾದ ಸ್ವಾಮಿ ಜ್ಞಾನಯೋಗಾನಂದಜಿ, ‘ಸ್ಫೂರ್ತಿ’ ಪುಸ್ತಕದ ಬಗ್ಗೆ ಪ್ರಕಾಶನ ವಿಭಾಗದ ಮುಖ್ಯಸ್ಥರಾದ ಸ್ವಾಮಿ ಸರ್ವಜಯಾನಂದಜಿ ಮಾತನಾಡಿದರು. ವಿಶೇಷ ಆಹ್ವಾನಿತರಾದ ಶ್ರೀ ವಾಸು ಹಾಗೂ ಡಾ. ವಸಂತಕುಮಾರ್ ತಿಮಕಾಪುರ ಅವರು ಮಾತನಾಡಿದರು. ಸಾಂಕೇತಿಕವಾಗಿ ಆಯ್ದ ಭಕ್ತರಿಗೆ ಹಾಗೂ ಸ್ವಯಂಸೇವಕರಿಗೆ ಸಸ್ಯಗಳನ್ನು ವಿತರಿಸಲಾಯಿತು. ಉದ್ಘಾಟನಾ ಭಾಷಣವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಹೆಚ್.ಸಿ.ರಾಜೀವ್ ಅವರು ನೆರವೇರಿಸಿಕೊಟ್ಟರು. ಬಳಿಕ ಇನ್ನೊಬ್ಬರು ಮುಖ್ಯ ಅತಿಥಿಗಳಾದ ಶ್ರೀರಾಜೇಂದ್ರ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ‘ವಿವೇಕಶಿಕ್ಷಣ’ ಉಚಿತ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಯಿತು. ವಿದ್ಯಾಶಾಲೆಯ ಪ್ರಾಂಶುಪಾಲರಾದ ಶ್ರೀ ಎಸ್. ಬಾಲಾಜಿಯವರು ವಂದನಾರ್ಪಣೆ ಮಾಡಿದರು. ಶಾಂತಿಮಂತ್ರದೊಂದಿಗೆ ಉದ್ಘಾಟನಾ ಕಾರ್ಯಕ್ರಮವು ಮುಕ್ತಾಯಗೊಂಡಿತು. ❖







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020